ಇ) ಮಂಡ್ಯ ನಗರಸಭೆಯ ಒಟ್ಟು 35 ವಾರ್ಡ್‌ಗಳ ಪೈಕಿ 25 ವಾರ್ಡ್‌ಗಳಲ್ಲಿ ಕಸ ವಿಲೇವಾರಿ ಕೆಲಸವನ್ನು ಗುತ್ತಿಗೆ ನೀಡಲಾಗಿದೆ. ಇನ್ನುಳಿದ 10 ವಾರ್ಡ್‌ಗಳನ್ನು ನಗರಸಭೆಯ ಕೆಲಸಗಾರರಿಂದ ನಿರ್ವಹಿಸಲಾಗುತ್ತಿದೆ.

ಗುತ್ತಿಗೆದಾರರ ವಿವರ: ಶ್ರೀ ವೆಂಕಟೇಶ್, ನಂ: 1809, 13ನೇ ಕ್ರಾಸ್, 24ನೇ ಮೇನ್, 1ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು.

ಈ) ದಿನಾಂಕ: 01.12.2011 ರಿಂದ 25 ವಾರ್ಡ್‌ಗಳಲ್ಲಿ ಕಸ ವಿಲೇವಾರಿ ಕೆಲಸವನ್ನು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿದ್ದು, ಕಸ ವಿಲೇವಾರಿ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ಉ) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 24 ಬಿಎಂಎಸ್ 2009, ದಿನಾಂಕ: 17.04.2009ರ ಸುತ್ತೋಲೆಯಲ್ಲಿನ ಸರ್ಕಾರದ ಸೂಚನೆ ರೀತ್ಯಾ ಮತ್ತು ಗುತ್ತಿಗೆ ಕರಾರಿನ ಒಪ್ಪಂದದ ರೀತ್ಯಾ ನಿಬಂಧನೆಗಳಿಗೆ ಒಳಪಡಿಸಲಾಗಿದೆ.

ಊ) ಮಂಡ್ಯ ನಗರದಲ್ಲಿ ನೈರ್ಮಲ್ಯ ಕಾರ್ಯ ನಿರ್ವಹಣೆ ಬಗ್ಗೆ ಸಹಾಯವಾಣಿ ಮೂಲಕ ಬರುವ ದೂರುಗಳನ್ನು ದಾಖಲಿಸಿಕೊಂಡು ಅವುಗಳ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುತ್ತಿದೆ. ತಮ್ಮ ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರುಗಳಿಗೂ ಅವಕಾಶ ನೀಡದಂತೆ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರಲು ಕಛೇರಿಯ ನೈರ್ಮಲ್ಯ ಶಾಖೆ ಅಧಿಕಾರಿಗಳಿಗೆ ಆಗಿಂದಾಗ್ಗೆ ಸೂಚನೆಗಳನ್ನು ನೀಡಲಾಗುತ್ತಿದೆ. ಗುತ್ತಿಗೆದಾರರಿಗೆ ನೋಟೀಸ್‌ನ್ನು ನೀಡಿ, ಗುತ್ತಿಗೆಗೆ ನೀಡುರುವ ವಾರ್ಡ್‌ಗಳಲ್ಲಿ ಸಮರ್ಪಕವಾಗಿ ಸ್ವಚ್ಛತಾ ಕೆಲಸ ನಿರ್ವಹಿಸಲು ಸೂಚನೆ ನೀಡಲಾಗಿದೆ. ಸಮರ್ಪಕವಾಗಿ ಕೆಲಸ ನಿರ್ವಹಿಸದಿರುವುದು ಕಂಡು ಬಂದ ಸಂದರ್ಭಗಳಲ್ಲಿ ಗುತ್ತಿಗೆದಾರರ ಮೇಲೆ ಟೆಂಡರ್ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಲೋಕೋಪಯೋಗಿ ರಸ್ತೆಗಳು ಹಾಳಾಗಿರುವುದು

1032 (851) ಶ್ರೀ ಶ್ರೀನಿವಾಸ ಎಂ. (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಲೋಕೋಪಯೋಗಿ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದರಿಂದ ಜನ-ಜಾನುವಾರುಗಳು ಓಡಾಡಲು ತೊಂದರೆಯಾಗಿರುವುದು ನಿಜವಲ್ಲವೇ;

ಇ) ಈ ರಸ್ತೆಗಳನ್ನು ಕೆಸರುಗದ್ದೆಯನ್ನಾಗಿ ಮಾಡಿ ರೈತರು ನಾಟಿ ಮಾಡಿದ್ದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಬೆಂಬಲ ಬೆಲೆಯನ್ನು ಘೋಷಿಸಿ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮಂಡ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 3 ರಾಜ್ಯ ಹೆದ್ದಾರಿಗಳು ಹಾದು ಹೋಗಿದ್ದು, ಒಟ್ಟು ಉದ್ದ 38,40 ಕಿ.ಮೀ. ಇರುತ್ತದೆ, 28 ಜಿಲ್ಲಾ ಮುಖ್ಯರಸ್ತೆಗಳು ಇದ್ದು, ಇವುಗಳ ಒಟ್ಟು ಉದ್ದ 262.70 ಕಿ.ಮೀ. ಇರುತ್ತದೆ. ಇವುಗಳಲ್ಲಿ ಕೆಲವು ಭಾಗದ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) **ಮಂಡ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ:**

1. ಮಾರಗೌಡನಹಳ್ಳಿ – ಬಿಳಿದೇಗಲು ರಸ್ತೆಯು 10.6 ಕಿ.ಮೀ. ಉದ್ದ ಮತ್ತು 3.75 ಮೀಟರ್ ಅಗಲದ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಸರಪಳಿ 0.00 ತಿಂದ 1.05 ಕಿ.ಮೀ. ಸುಸ್ಥಿತಿಯಲ್ಲಿರುತ್ತದೆ. ಉಳಿಕೆ 1.05 ರಿಂದ 10.60 ಕಿ.ಮೀ. ವರೆಗಿನ ರಸ್ತೆಯನ್ನು 13ನೇ ಹಣಕಾಸು ಅನುದಾನದ ಅಡಿಯಲ್ಲಿ ರೂ.4.00 ಲಕ್ಷಗಳ ವೆಚ್ಚ ಮಾಡಿ ನಿರ್ವಹಣೆ ಮಾಡಲಾಗಿತ್ತು, ಅಕಾಲಿಕ ಮಳೆಯಿಂದಾಗಿ ಸದರಿ ರಸ್ತೆಯು ಕೆಬ್ಬಳ್ಳ ಗ್ರಾಮದ ಹತ್ತಿರ ಕೆಲವು ಭಾಗಗಳಲ್ಲಿ ಗುಂಡಿ ಗಳುಂಟಾಗಿರುತ್ತದೆ. ಸದರಿ ಗುಂಡಿಗಳಲ್ಲಿ ಗ್ರಾಮಸ್ಥರು ನಾಟಿ ಮಾಡುವ ಮೂಲಕ ಪ್ರತಿಭಟಿಸಲಾಗಿ ಲೆಕ್ಕ ಶೀರ್ಷಿಕೆ 3054 ಅನುದಾನದ ಅಡಿಯಲ್ಲಿ ರೂ. 5,00 ಲಕ್ಷಗಳ ವೆಚ್ಚ ಮಾಡಿ ನಿರ್ವಹಣೆ ಮಾಡಲಾಗಿದೆ.
2. ಮಂಡ್ಯ – ನಾಗಮಂಗಲ ರಸ್ತೆಯಿಂದ ನರಗಲು-ಮಾಚಗೌಡ ನಹಳ್ಳಿ-ಗಣಿಗ-ಶಿವಪುರ ಮುಖಾಂತರ ಎನ್‌ಹೆಚ್-48 ಸೇರುವ ರಸ್ತೆಯು 15.9 ಕಿ.ಮೀ. ಉದ್ದ ಮತ್ತು 3.75

ಮೀಟರ್ ಅಗಲದ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಈ ರಸ್ತೆಯನ್ನು ಹಳ್ಳಿ ರಸ್ತೆಯಿಂದ ಜಿಲ್ಲಾ ಮುಖ್ಯ ರಸ್ತೆಗೆ ಮೇಲ್ದರ್ಜೆಗೇರಿಸಲಾಗಿರುತ್ತದೆ. ಸದರಿ ರಸ್ತೆಯಲ್ಲಿನ ಸರಪಳಿ 0.00 ಯಿಂದ 3.50 ಕಿ.ಮೀ. ವರೆಗೆ ರಸ್ತೆಯು ಸುಸ್ಥಿತಿಯಲ್ಲಿದ್ದು 3.50 ರಿಂದ 15.90 ಕಿ.ಮೀ. ವರೆಗಿನ ರಸ್ತೆಯಲ್ಲಿ ಗುಂಡಿಗಳುಂಟಾಗಿದ್ದು, ಗಣಿಗ ಗ್ರಾಮಸ್ಥರು ನಾಟಿ ಮಾಡುವ ಮೂಲಕ ಪ್ರತಿಭಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಗುಂಡಿಗಳನ್ನು ಮುಚ್ಚಲು ಲೆಕ್ಕ ಶೀರ್ಷಿಕೆ: 3054 ಯೋಜನೆ ಅಡಿಯಲ್ಲಿ ರೂ.10.00 ಲಕ್ಷಗಳ ಅನುದಾನ ಲಭ್ಯವಾಗಿದ್ದು, ಶೀಘ್ರವಾಗಿ ಕ್ರಮ ಕೈಗೊಂಡು ರಸ್ತೆ ನಿರ್ವಹಣೆ ಮಾಡಲಾಗುವುದು.

3. ಈ ಎರಡೂ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ಸಂಖ್ಯೆ: 1 ರ ರಸ್ತೆಗೆ ರೂ.400.00 ಲಕ್ಷಗಳು ಹಾಗೂ ಕ್ರಮ ಸಂಖ್ಯೆ:2ರ ರಸ್ತೆಗೆ ರೂ.330.00 ಲಕ್ಷಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಕಾಮಗಾರಿಗಳು

1033 (1183) ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಾಮಗಾರಿಗಳು ಈ ರೀತಿ ಸ್ಥಗಿತಗೊಳ್ಳಲು ಕಾರಣಗಳೇನು;

ಇ) ಕಳೆದ 2 ವರ್ಷಗಳಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳು ಎಷ್ಟು ಮತ್ತು ಯಾವುವು (ತಾಲ್ಲೂಕುವಾರು ವಿವರಗಳನ್ನು ನೀಡುವುದು);